**O.S.No.31/2020**
**D.W-1**

**<u>ಸಾಕ್ಷಿಯನ್ನು ದಿನಾಂಕಃ 21.07.2025ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**
**<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಡಿ ಎಸ್ ವಕೀಲರಿಂದ:</u>**

ದಾವಾ ಆಸ್ತಿಯಲ್ಲಿ ದಾವೇ ಹೂಡಿದಾಗಿನಿಂದ ಇಲ್ಲಿಯವರೆಗೆ ವಾದಿಯೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಾವಾಗಲೀ ನಮ್ಮ ಕುಟುಂಬದವರಾಗಲೀ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ವಾದಿಯ ಸ್ವಾಧೀನಕ್ಕೆ ತೊಂದರೆ ನೀಡಿದ ಕಾರಣ ಈ ದಾವೇ ಹೂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ತಾವು ರಾಗಿ, ಜೋಳ ಬೆಳೆಯುತ್ತಿದ್ದೇವೆ ಎಂದು ನುಡಿಯುತ್ತಾರೆ. ನಾವು ರಾಗಿ, ಜೋಳ ಬೆಳೆಯುತ್ತಿದ್ದೇವೆ ಎಂದು ತೋರಿಸಲು ಬೆಳೆ ದೃಡೀಕರಣ ಪತ್ರ ಸಲ್ಲಿಸಿಲ್ಲ. ದಾವಾ ಆಸ್ತಿ ನಿವೇಶನವಾಗಿದ್ದು, ಬೆಳೆ ಬೆಳೆಯಲು ಆಗುವುದಿಲ್ಲ ಎಂದರೆ ಸರಿಯಲ್ಲ. ನಾವು ವಾಸವಿದ್ದೇವೆ ಎಂದು ಹೇಳುವ ಆರ್ ಸಿ ಸಿ ಮನೆಯ ಖಾತಾ ನಂಬರ್ 1846/270 ಇರುತ್ತದೆ. ಸದರಿ ಮನೆಯ ವಿಸ್ತೀರ್ಣ 43 ½ x 30 ಇರುತ್ತದೆ. ಸದರಿ ಮನೆಯ ಚೆಕ್ಕುಬಂದಿ ಪೂರ್ವಕ್ಕೆ ಸರ್ಕಾರಿ ಶಾಲೆ, ಪಶ್ಚಿಮಕ್ಕೆ ಮತ್ತು ಉತ್ತರಕ್ಕೆ ಹಾಗೂ ದಕ್ಷಿಣಕ್ಕೆ ನಮ್ಮದೇ ಉಳಿಕೆ ಜಮೀನು ಇರುತ್ತದೆ. ಸದರಿ ಮನೆಯ ವಿವರವನ್ನು ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿದ್ದೇನೆ. ಆ ರೀತಿ ಬರೆಸದೇ ಇದ್ದರೂ ಮತ್ತು ದಾವಾ ಆಸ್ತಿಯಲ್ಲಿ ಯಾವುದೇ ಮನೆ ಇರದೇ ಇದ್ದರೂ ದಾವೇ ಹೂಡಿದ ನಂತರ ಆ ರೀತಿ ಯೋಚಿಸಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.23/9ರಲ್ಲಿ ನಾನು ಹೇಳುವ ಮನೆ ಇದೆ ಎಂದು ತೋರಿಸಲು ಎಸಿ ನ್ಯಾಯಾಲಯದ ಆದೇಶ ಮತ್ತು ಕ್ರಯ ಪತ್ರ ಹಾಜರುಪಡಿಸಿದ್ದೇನೆ.

2. ನಿಪಿ.1ರ ಕ್ರಯ ಪತ್ರ ರದ್ದತಿಗಾಗಿ ಪ್ರಶ್ನೆ ಮಾಡಿದ್ದೀರಾ ಎಂದರೆ ಸಾಕ್ಷಿಯು ಕ್ರಯ ಪತ್ರ ಆದ ಬಗ್ಗೆ ನನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಎಸಿ ನ್ಯಾಯಾಲಯದಲ್ಲಿ ಪುರಸಭೆ ಖಾತೆ ರದ್ದು ಮಾಡಿ ಎಂದು ಪ್ರಶ್ನೆ ಮಾಡಿದ್ದೆವು. ಎಸಿ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ ನಂತರ ಸಿವಿಲ್ ನ್ಯಾಯಾಲಯದಲ್ಲಿ ನಿಪಿ.1ರ ಕ್ರಯ ಪತ್ರವನ್ನು ಇನ್ನೂ ಪ್ರಶ್ನೆ ಮಾಡಿಲ್ಲ. ದಾವಾ ಆಸ್ತಿಯಲ್ಲಿ ನಮ್ಮ

ಕುಟುಂಬದವರು ಮನೆ ಕಟ್ಟಿಲ್ಲ ಮತ್ತು ಯಾವುದೇ ಬೆಳೆ ಬೆಳೆಯುತ್ತಿಲ್ಲ ಎಂದರೆ ಸರಿಯಲ್ಲ.

3. ನಿಡಿ.6ರಲ್ಲಿ ವಾದಿ ಪಕ್ಷಗಾರರಲ್ಲ ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು, ಕ್ರಯವಾದ ಬಗ್ಗೆ ತನಗೆ ಗೊತ್ತಿರಲಿಲ್ಲವೆಂದು ನುಡಿಯುತ್ತಾರೆ. ನಿಪಿ.1 ಆದ ಬಗ್ಗೆ ನನಗೆ 2020 ರಲ್ಲಿ ಗೊತ್ತಾಯಿತು. ನಿಡಿ.8ರಲ್ಲಿ ವಾದಿಯನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು, ಕ್ರಯವಾದ ಬಗ್ಗೆ ತನಗೆ ಗೊತ್ತಿರಲಿಲ್ಲವೆಂದು ನುಡಿಯುತ್ತಾರೆ. ನಿಡಿ.8ರಲ್ಲಿ ನಮೂದಿಸಿರುವ ಅಸಲು ದಾವಾ ನಂ.489/2016 ದಾವಾ ಆಸ್ತಿಗೆ ಸಂಬಂಧಿಸಿದ್ದೇ ಆಗಿರುತ್ತದೆ. ನಿಡಿ.8ರ 4ನೇ ಪುಟದಲ್ಲಿ ಸರ್ವೆ ನಂ.23/9ಎ ಇಂದ ವಿಭಾಗವಾಗಿ 23/34 ಎಂದು ನಮೂದಿಸಿದೆ ಎಂದರೆ ಸಾಕ್ಷಿಯು ಅದು ಪಕ್ಕದ ಸ್ವತ್ತು ಎಂದು ನುಡಿಯುತ್ತಾರೆ. ನಮಗೆ ಕೇವಲ 39 ಗುಂಟೆ ಆಸ್ತಿ ಬಂದಿದೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿದ್ದೇನೆ. ಅಸಲು ದಾವಾ ನಂ.489/2016ರಲ್ಲಿ ನಮ್ಮ ಕುಟಂಬಕ್ಕೆ ಯಾವುದೇ ಹಿಸ್ಸೆ ಬಂದಿರಲಿಲ್ಲ. ನಿಡಿ.8ರ ಪ್ರಕರಣದಲ್ಲಿ ಸರ್ವೆ ನಂ.23 ಮತ್ತು 24ನ್ನು ವಜಾ ಮಾಡಲು ಕೋರಿದ್ದೆವು. ನಿಡಿ.4ರ ಕಲಂ 10 ರಲ್ಲಿ ಹನುಮಂತಯ್ಯ ರವರ ಹೆಸರನ್ನು ತೆಗೆದು ಸುಬ್ರಮಣ್ಯ ಹೆಸರನ್ನು ಸೇರಿಸಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು, ಸದರಿ ಎಂಟ್ರಿ ಮೇಲೆ ತಾವು ಅಪೀಲು ಹೋಗಿದ್ದು, ಅದು ತಮ್ಮಂತೆ ಆಗಿದೆ ಎಂದು ನುಡಿಯುತ್ತಾರೆ. ಸದರಿ ಅಪೀಲುಗೂ ಮೊದಲು ತಾವು ತಹಶೀಲ್ದಾರ್ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದು, ಸದರಿ ಪ್ರಕರಣದ ಆದೇಶವನ್ನು ಹಾಜರುಪಡಿಸಿದ್ದೇನೆ. ನಿಡಿ.7 ಸುಬ್ರಮಣ್ಯ ಮತ್ತು ಇತರರು ಸಲ್ಲಿಸಲಾಗಿದೆ ಎಂದರೆ ಸರಿ. ನಿಡಿ.7ರಲ್ಲಿ ಆದೇಶವಾದ ನಂತರ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದೀರಾ ಎಂದರೆ ಸಾಕ್ಷಿಯು ಅಷ್ಟರಲ್ಲಿ ವಾದಿಗಳೇ ಪ್ರಕರಣ ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಇಲ್ಲದ ಕಾರಣ, ನಾವು ಯಾವುದೇ ದಾವೆ ಹೂಡಿಲ್ಲ ಎಂದರೆ ಸರಿಯಲ್ಲ.

4. PW.2 ರವರು ನಮಗೆ ಗೊತ್ತಿಲ್ಲ. ದಾವಾ ಆಸ್ತಿ ನಿವೇಶನವಾಗಿದ್ದು, ವಾದಿಯೇ ಸ್ವಾಧೀನದಲ್ಲಿದ್ದರೂ ಅದನ್ನು ಲಪಟಾಯಿಸಲು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

*( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್.